ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಜಡಗನಹಳ್ಳಿ ಗ್ರಾಮದಲ್ಲಿ ಜಲ ಜೀವನ್ ಮಿಷನ್

# ಯಶಸ್ವಿ ಅನುಷ್ಠಾನದ ಯಶೋಗಾಥೆ

ಗ್ರಾಮೀಣ ಜನರಿಗೆ ಶುದ್ಧ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು ಜಲ ಜೀವನ್ ಮಿಷನ್ ಉದ್ದೇಶವಾಗಿದೆ. ರಾಜ್ಯದ ಬಹುತೇಕ ಗ್ರಾಮಗಳಲ್ಲಿ ನೀರಿನ ಬರದಿಂದ ತತ್ತರಿದ ಜನರಿಗೆ ಜಲ ಜೀವನ್ ಮಿಷನ್ ವರದಾನವಾಗಿದೆ. ಇಂತಹ ಗ್ರಾಮಗಳಲ್ಲಿ ದಾವಣಗೆರೆಯ ಜಡಗನಹಳ್ಳಿ ಗ್ರಾಮವೂ ಒಂದಾಗಿದೆ. ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ ಜಡಗನಹಳ್ಳಿ ಗ್ರಾಮವು ಕನಕಗೊಂಡನ ಹಳ್ಳಿ ಗ್ರಾಮ ಪಂಚಾಯತಿಗೆ ಸೇರಿದ್ದು ಇದು ದಾವಣಗೆರೆಯಿಂದ 18 ಕಿಮೀ ದೂರದಲ್ಲಿದೆ. ಪ್ರಸ್ತುತ 141 ಕುಟುಂಬಗಳು ಈ ಗ್ರಾಮದಲ್ಲಿ ವಾಸವಾಗಿವೆ.

ಜಡಗನಹಳ್ಳಿ ಗ್ರಾಮದ ಜನರು ಈ ಮೊದಲು ಕುಡಿಯುವ ನೀರಿಗಾಗಿ ಹಳ್ಳ, ಬಾವಿ, ಮತ್ತು ಕೆರೆಗಳನ್ನು ಅವಲಂಬಿಸಿದ್ದರು. ಪ್ರತಿನಿತ್ಯದ ಬಳಕೆಗಾಗಿ ಈ ಮೂಲಗಳಿಂದಲೇ ನೀರನ್ನು ಸಂಗ್ರಹಿಸುತ್ತಿದ್ದರು. ಕೆಲ ಸಂದರ್ಭದಲ್ಲಿ ಪರಿಸರ ವೈಪ್ಯರೀತ್ಯಗಳಿಂದಾಗಿ ನೀರಿನ ಅಲಭ್ಯತೆ ಮತ್ತು ಅಶುದ್ಧ ನೀರಿನಿಂದ ಗ್ರಾಮದ ಜನರು ಅನೇಕ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ಸಂಕಷ್ಟಕ್ಕೆ ಒಳಾಗುತ್ತಿದ್ದರು. ಇನ್ನು ಈ ಗ್ರಾಮದ ಬಹುತೇಕ ಕುಟುಂಬಗಳ ದೈನಂದಿನ ನಿರ್ವಹಣೆಗಾಗಿ ನೀರು ತರುವ ಜವಾಬ್ದಾರಿ ಹೆಣ್ಣುಮಕ್ಕಳದ್ದಾಗಿತ್ತು. ಇದರಿಂದಾಗಿ ಗ್ರಾಮದ ಹೆಚ್ಚಿನ ಹೆಣ್ಣು ಮಕ್ಕಳು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಬೇಕಾದ ಪರಿಸ್ಥಿತಿಯಿಂದ ಹೆಣ್ಣು ಮಕ್ಕಳ ಜೀವನ ಮಟ್ಟ ಕುಸಿದಿತ್ತು.

ಗ್ರಾಮದಲ್ಲಿ ಹಂತ ಹಂತವಾಗಿ ಕಾರ್ಯಾತ್ಮಕ ಗೃಹನಳ ಸಂಪರ್ಕ ನೀಡಲಾಗಿದ್ದು, ಮೊದಲಿಗೆ 60 ಮನೆಗೆ ನಳ ಸಂಪರ್ಕವ ಕಲ್ಪಿಸಿಕೊಡಲಾಗಿತ್ತು. ಬಳಿಕ 141 ಕುಟುಂಬಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ನೀಡಲಾಯಿತು. ಮೊದಲು ನೀರಿಗಾಗಿ ಹೊತ್ತಲ್ಲದ ಹೊತ್ತಲ್ಲಿ ಕಾಯುತ್ತಿದ್ದ ಜನರು ಈಗ ಮನೆ ಬಾಗಿಲಿಗೆ ನೀರಿನ ಸಂಪರ್ಕ ಪಡೆದಿದ್ದಾರೆ. “ಈ ಮೊದಲು 3 ಕೊಳವೆ ಬಾವಿಯಿಂದ 2 ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗುತ್ತಿತ್ತು ಆದರೆ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಮನೆಮನೆಗೆ ಕಾರ್ಯಾತ್ಮಕ ನಳ ಸಂಪರ್ಕದಿಂದ ಕೇವಲ 1 ಕೊಳವೆ ಬಾವಿಯಿಂದ 2 ಊರಿಗೆ ನೀರು ಸೌಕರ್ಯ ಒದಗಿಸಲಾಗುತ್ತಿದೆ. ಇದು ಸಾಧ್ಯವಾಗಿದ್ದು ನೀರಿನ ಬಳಕೆಯ ಕುರಿತು ಜನರಿಗೆ ಅರಿವು ಮೂಡಿಸಿದ್ದು ಜಲ ಜೀವನ್ ಮಿಷನ್ ನೀರಿನ ಸಮರ್ಪಕ ಬಳಕೆಗೆ ಸಾಕ್ಷಿಯಾಗಿದೆ ಎಂದು ಗ್ರಾ.ಪಂ ಚುನಾಯಿತ ಸದಸ್ಯರಾದ ಗುತ್ತೇಪ್ಪನವರು ತಿಳಿಸಿದ್ದಾರೆ.

## ಜಲಜೀವನ್ ಮಿಷನ್ ಯೋಜನೆ ಅನುಷ್ಠಾನ ವೇಳೆ ಎದುರಾದ ಸವಾಲುಗಳು :

ಜಲಜೀವನ್ ಮಿಷನ್ ಮನೆ ಮನೆಗೆ ಗಂಗೆ ಯೋಜನೆ ಅನುಷ್ಠಾನಗೊಳಿಸುವಾಗ ಸಮುದಾಯದಲ್ಲಿ ವಂತಿಗೆ ವಿಚಾರಕ್ಕೆ ಸವಾಲು ಎದುರಿಸಬೇಕಾಯಿತು ನೀರಿನ ಸಮರ್ಪಕ ಬಳಕೆಯ ಸದುದ್ದೇಶಕ್ಕಾಗಿ ಮೀಟರ್ ಅಳವಡಿಕೆ ಬೇಕು ಬೇಡಗಳ ಚರ್ಚೆಗಳ ಸವಾಲು ಎದುರಾಯಿತು.

ನಾಗರಿಕರ ಸಹಭಾಗಿತ್ವದೊಂದಿಗೆ ಸಮುದಾಯ ಮತ್ತು ಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮುಖಾಂತರ ಯೋಜನೆಯು ಯಶಸ್ವಿಗೊಂಡಿದೆ. ಇವುಗಳಲ್ಲಿ ಮುಖ್ಯವಾದವು, ಬೀದಿ ನಾಟಕ, ಶಾಲಾ ಮಕ್ಕಳ ಜಾಥ, ಅರಿವು ಕಾರ್ಯಗಾರ, ಕ್ಷೇತ್ರಗಳ ಭೇಟಿ ಪ್ರವಾಸ, ಸ್ವ-ಸಹಾಯ ಸಂಘಗಳ ಜಾಥಾ, ಶಾಲಾ ಮಕ್ಕಳ ಪ್ರಬಂಧ ಸ್ಪರ್ಧೆ, ಕಿರು ಜಲ ಮೂಲಗಳ ಪುನಶ್ಚೇತನ, ಜನ ಸಮುದಾಯ ಮತ್ತು ಶಾಲೆಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಕುರಿತು ಕಿರು ಚಿತ್ರ ಪ್ರದರ್ಶನ, ವಿಶೇಷ ಗ್ರಾಮ ಸಭೆ, ಗೋಡೆ ಬರಹ, ಜಲ ಮೂಲಗಳ ರಕ್ಷಣೆ ಮತ್ತು ನೀರಿನ ಸಂರಕ್ಷಣೆ ಕುರಿತು ಪ್ರಚ, ಗ್ರಾ.ಪಂ ಸದಸ್ಯರಿಗೆ ತರಬೇತಿ, ಗ್ರಾಮ ಮತ್ತು ನೀರು ನೈರ್ಮಲ್ಯ ಸಮಿತಿ ಸದಸ್ಯರಿಗೆ ತರಬೇತಿ

## ಯೋಜನೆ ಅನುಷ್ಠಾನ ಸಂದರ್ಭದಲ್ಲಿ ವ್ಯಯಿಸಿದ ವೆಚ್ಚ:

ಕನಕಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಡಗನಳ್ಳಿ ಗ್ರಾಮಕ್ಕೆ 70 ಲಕ್ಷ ರೂಪಾಯಿಗಳ ಮೊತ್ತದಲ್ಲಿ ಜಲ ಜೀವನ್ ಮಿಷನ್ ಅನುಷ್ಠಾನಗೊಳಿಸಲಾಗಿದೆ. ಜಲ ಜೀವನ್ ಮಿಷನ್ ನಿಂದ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಬವಣೆ ನೀಗಿಸಿದಂತಾಗಿದೆ. ಕೈಗೆಟಕುವ ದರದಲ್ಲಿ ನಿಯಮಿತ ಮತ್ತು ದೀರ್ಘಾವಧಿಯ ಆಧಾರದ ಮೇಲೆ ಯೋಜನೆಯನ್ನು ಸುಸ್ಥಿರಗೊಳಿಸಲು ನೀರು ಮತ್ತು ನೈರ್ಮಲ್ಯ ಸಮಿತಿಯನ್ನು ರಚಿಸಿರುವುದು ಗ್ರಾಮದಲ್ಲಿನ ಜನರೊಟ್ಟಿಗೆ ಉತ್ತಮ ಸಂಬಂಧದ ಸಂಕಲ್ಪಕ್ಕೆ ಸಾಕ್ಷಿಯಾಗಿದೆ.



ನೀರನ್ನು ಮಿತವಾಗಿ ಬಳಸಿ;
ಮುಂದಿನ ಪೀಳಿಗೆಗೆ ನೀರು ಉಳಿಸಿ